**Code No. 18 Y**

## ವಾಣಿಜ್ಯ ಪರೀಕ್ಷೆಗಳು

# ಕನ್ನಡ ಶೀಘ್ರಲಿಪಿ – ಪ್ರೌಢ ದರ್ಜೆ – ದ್ವಿತೀಯ ಪತ್ರಿಕೆ (ವಿಸ್ತರಿಸುವಿಕೆ)

ಜನವರಿ, 2018

ವೇಳೆ { ಉಕ್ತಲೇಖನ : 5 ನಿಮಿಷಗಳು
ವಿಸ್ತರಿಸುವಿಕೆ : 2 ಗಂಟೆಗಳು

ಪರಮಾವಧಿ ಅಂಕಗಳು : 100

***ಓದುಗರಿಗೆ ಸೂಚನೆಗಳು :***

1) ಈ ಕೆಳಗೆ ಕೊಟ್ಟಿರುವ ವಿಷಯವನ್ನು ಒಂದು ನಿಮಿಷಕ್ಕೆ ಇನ್ನೂರ ಅರವತ್ತು (260) ಅಕ್ಷರಗಳ ವೇಗದಲ್ಲಿ ಪ್ರಶ್ನೆ ಪತ್ರಿಕೆಯಲ್ಲಿ ಸೂಚಿಸಿದ ರೀತಿಯಲ್ಲೇ ಓದತಕ್ಕದ್ದು.
2) ಉಕ್ತಲೇಖನ ಮುಗಿದ ನಂತರ ಅಭ್ಯರ್ಥಿಗಳಿಗೆ ಅವರ ಶೀಘ್ರಲಿಪಿಯ ಟಿಪ್ಪಣಿಗಳನ್ನು ಅವಶ್ಯವಾಗಿರುವಂತೆ ಸರಿಯಾದ ನಮೂನೆಯಲ್ಲಿ ಸೂಕ್ತವಾಗಿ ವಿಸ್ತರಿಸಬೇಕೆಂದು ಸೂಚಿಸತಕ್ಕದ್ದು.
3) ಪ್ರಶ್ನಾಂಕಗಳು ವೇಗ ವಿಷಯದ ಭಾಗವಾಗಿರುವುದರಿಂದ, ಅವುಗಳನ್ನು ಹಾಗೂ ಪ್ರಶ್ನೆ ನಮೂನೆಯನ್ನು ***ಎತ್ತರಿಸಿದ ಧ್ವನಿಯಲ್ಲಿ*** ಓದತಕ್ಕದ್ದು.
4) ಪ್ರತಿಯೊಂದು ಪ್ರಶ್ನೆಗೂ ನಿಗದಿಯಾಗಿರತಕ್ಕ ಅಂಕಗಳನ್ನು ಪ್ರಶ್ನೆಗಳ ಉಕ್ತಲೇಖನ ಕೊಡುವಾಗ ಓದಕೂಡದು. ಉಕ್ತಲೇಖನ ಮುಗಿದ ನಂತರ ಈ ಅಂಶಗಳನ್ನು ಅಭ್ಯರ್ಥಿಗಳಿಗೆ ತಿಳಿಸತಕ್ಕದ್ದು.

---

***ಪ್ರಶ್ನೆ ಒಂದು :*** ಬೆಂಗಳೂರು ಗ್ರಾಮಾಂತರ ಜಿಲ್ಲೆ ನೆಲಮಂಗಲ ತಾಲ್ಲೂಕು ಸೋಮಪುರ ಗ್ರಾಮದ ಸರ್ವೇ ನಂ. 105 ರಲ್ಲಿರುವ ಜಮೀನುಗಳು ಸಾರ್ವಜನಿಕ ಉದ್ದೇಶಕ್ಕಾಗಿ ವಸತಿ
$\frac{1}{4}$ ಗೃಹಗಳನ್ನು ನಿರ್ಮಾಣ/ ಮಾಡಲು ಕರ್ನಾಟಕ ಭೂಸುಧಾರಣಾ ಅಧಿನಿಯಮ 17ರಲ್ಲಿ ನಿಯಮ 5(2)ನೇ ಪ್ರಕರಣದ ಅಧಿಕಾರಗಳನ್ನು ಉಪಯೋಗಿಸಲು ವಿಶೇಷ ಭೂಸ್ವಾಧೀನ
$\frac{1}{2}$ ಅಧಿಕಾರಿಗಳು, ನೆಲಮಂಗಲ ಮತ್ತು ಸಿ/ಬ್ಬಂದಿ ವರ್ಗದವರಿಗೆ ಪ್ರಾಧಿಕಾರ ನೀಡಲಾಗಿದೆ. ಜಮೀನಿನಲ್ಲಿ ಆಸಕ್ತಿಯುಳ್ಳವರು ಈ ಬಗ್ಗೆ ಆಕ್ಷೇಪಣೆ ಮಾಡುವುದಿದ್ದರೆ ಅಧಿಸೂಚನೆ ಹೊರಡಿಸಿದ 30 ದಿನಗಳೊಳಗಾಗಿ ವಿಶೇಷ
ಭೂ/ಸ್ವಾಧೀನಾಧಿಕಾರಿಗಳು, ನೆಲಮಂಗಲ $\frac{3}{4}$
ಇವರಿಗೆ ಲಿಖಿತ ಮೂಲಕ ಸಲ್ಲಿಸತಕ್ಕದ್ದು. ಜಮೀನಿನ ನಕ್ಷೆಯನ್ನು ಸಂಬಂಧಪಟ್ಟ ಕಚೇರಿಯಲ್ಲಿ ಇಡಲಾಗಿದೆ.

**ಈ ಎಲ್ಲಾ ಅಂಶಗಳನ್ನು ಕ್ರೋಢೀಕರಿಸಿX 1**
**ಅಧಿಸೂಚನೆಯನ್ನು ತಯಾರಿಸಿ.**

(ಅಂಕಗಳು : 20)

[ Turn over

**ಪ್ರಶ್ನೆ ಎರಡು :** ಈ ಕ್ಷೇತ್ರದ ನಾಗರೀಕರ ಮತ್ತು
ಆಪ್ತರ ಒತ್ತಾಯದ ಮೇರೆಗೆ ಚುನಾವಣೆಗೆ
ಸ್ಪರ್ಧಿಸುವುದಾಗಿಯೂ ನಾನಾ ರೀತಿಯಲ್ಲಿ
$\frac{1}{4}$ ಈಗಾಗಲೇ ಈ ಕ್ಷೇತ್ರದ ಪುರೋ/ಭಿವೃದ್ಧಿಗಾಗಿ
ಸೇವೆ ಸಲ್ಲಿಸಿರುವುದು ತಮಗೆಲ್ಲರಿಗೂ ತಿಳಿದ
ಸಂಗತಿಯಾಗಿದೆ ಮತ್ತು ಚುನಾವಣೆಯಲ್ಲಿ
ಮತದಾರರ ಆಶೀರ್ವಾದ ಬೆಂಬಲದಿಂದ
$\frac{1}{2}$ ಜಯಗಳಿಸಿದ ನಂತರ ನೀರಿನ ಸಮಸ್ಯೆ/
ಒಳಚರಂಡಿ ವ್ಯವಸ್ಥೆಯನ್ನು ಹಾಗೂ ಬೀದಿ
ದೀಪಗಳಿಗೆ ಬದಲು ಸೋಲಾರ್ ಲೈಟ್‌ಗಳನ್ನು
ಹಾಕಿಸಿಕೊಟ್ಟು ಎಲ್ಲ ರೀತಿಯಿಂದಲೂ
ನಾಗರೀಕರಿಗೆ ಸೌಲಭ್ಯಗಳನ್ನು ಒದಗಿಸಿಕೊಡಲು
$\frac{3}{4}$ ಶ್ರಮಿಸುವು/ದಾಗಿ ಮತ್ತು ಚುನಾವಣೆ
ಚಿಹ್ನೆಯಾಗಿ "ಕಮಲ" ಗುರುತಿಗೆ ತಮ್ಮ
ಅತ್ಯಮೂಲ್ಯವಾದ ಮತವನ್ನು ನೀಡಬೇಕೆಂದು
ಮನವಿ ಸೂಚಿಸಿ ಬಾಗಲಕೋಟೆ ನಗರಸಭೆಯ
ಚುನಾವಣೆ ದಿನಾಂಕ : 15ನೇ ಮೇ
2 2X017ರಂದು ಬೆಳಿಗ್ಗೆ 7ರಿಂದ ಸಂಜೆ 5ರವರೆಗೆ
ನಡೆಯುವುದು. **ನೀವೇ ಒಬ್ಬ ಅಭ್ಯರ್ಥಿಯಾಗಿ
ಚುನಾವಣೆ ಪ್ರಣಾಳಿಕೆ ತಯಾರಿಸಿ.**

(ಅಂಕಗಳು : 20)

**ಪ್ರಶ್ನೆ ಮೂರು :** ದಿನಾಂಕ 02.11.2017ರ
ಗುರುವಾರ ಬೆಳಿ/ಗ್ಗೆ 10.00 ಗಂಟೆಗೆ ಕರ್ನಾಟಕ $\frac{1}{4}$
ಸರ್ಕಾರದ ಸಚಿವಾಲಯ ನೌಕರರ ಸಂಘ,
ಬೆಂಗಳೂರು ಕರ್ನಾಟಕ ಸರ್ಕಾರ
ಸಚಿವಾಲಯ ಕ್ಲಬ್ ಸಹಯೋಗದೊಂದಿಗೆ
ಕನ್ನಡ ರಾಜ್ಯೋತ್ಸವ ದಿನಾಚರಣೆಯ/ನ್ನು $\frac{1}{2}$
ಆಚರಿಸಲಾಗುವುದು. ನೌಕರರ ಸಂಘದ
ಮಾಜಿ ಅಧ್ಯಕ್ಷರು ಅಧ್ಯಕ್ಷತೆ ವಹಿಸುವವರು,
ವಿಧಾನಸಭೆಯ ಅಧ್ಯಕ್ಷರು ಮುಖ್ಯ
ಅತಿಥಿಗಳಾಗಿ ದಯಮಾಡಿಸುವವರು,
ಸರ್ವರೂ ಸಕಾಲಕ್ಕೆ/ ಆಗಮಿಸಬೇಕೆಂದು $\frac{3}{4}$
ಸಂಘದ ಅಧ್ಯಕ್ಷರು ಪಿ. ಗುರುಸ್ವಾಮಿಯವರು
ವಿನಂತಿಸಿದ್ದಾರೆ.

**ಈ ಎಲ್ಲಾ ಅಂಶಗಳನ್ನು ಕ್ರೋಢೀಕರಿಸಿ ಆಹ್ವಾನ ಪತ್ರಿಕೆ ತಯಾರಿಸಿ.** (ಅಂಕಗಳು : 20)

**ಪ್ರಶ್ನೆ ನಾಲ್ಕು :** ತಮ್ಮ ನ್ಯಾಯಯುತ
ಬೇಡಿಕೆಗXಳನ್ನು ಈಡೇರಿಸಿಕೊಳ್ಳುವ 3
ಸಲುವಾಗಿ ಕರ್ನಾಟಕ ರಾಜ್ಯ ಸರ್ಕಾರದ
ಗ್ರೂಪ್ "ಸಿ ಮತ್ತು ಡಿ" ನೌಕರರು ದಿನಾಂಕ
30 ಹಾಗೂ 31ನೇ ಅಕ್ಟೋಬರ್ 2017ರಂದು
ರಾಜ್ಯಾದ್ಯಂತ ಮುಷ್ಕರ ನಡೆಸಿದ್ದರು/. ನೌಕರರ $\frac{1}{4}$
ಸಂಘದ ಮನವಿಯಂತೆ ಈ ಎರಡು

ದಿನಗಳಂದು ಮುಷ್ಕರದಲ್ಲಿ ಭಾಗವಹಿಸಿದ
ನೌಕರರ ಗೈರು ಹಾಜರಿಯ ಅವಧಿಯನ್ನು
ಅವರ ಹಕ್ಕಿನಲ್ಲಿ ಮತ್ತು ಪಡೆಯಲು
$\frac{1}{2}$ ಅರ್ಹರಿರುವ/ ರಜೆಯೆಂದು ಪರಿಗಣಿಸಲು
ಸರ್ಕಾರವು ಆದೇಶಿಸಿದೆ. ರಜೆಯನ್ನು
ಮಂಜೂರು ಮಾಡುವ ಪ್ರಾಧಿಕಾರಗಳು ತಮ್ಮ
ನೌಕರರ ಹಕ್ಕಿನಲ್ಲಿರುವ ಮತ್ತು ಪಡೆಯಲು
$\frac{3}{4}$ ಅರ್ಹರಿರುವ ರಜೆಯನ್ನು ನಿಯಮ/ಗಳ ರಿತ್ಯ
ಮಂಜೂರು ಮಾಡಲು ಕ್ರಮ ಕೈಗೊಳ್ಳಲು
ಆದೇಶಿಸಿದೆ. **ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರು ಹೊರಡಿಸಿದಂತೆ ಆದೇಶ ತಯಾರಿಸಿ.**

(ಅಂಕಗಳು : 20)

4 ***ಪ್ರಶ್ನೆ ಐದು :*** ಭಾರತೀಯ ರಿXಸರ್ವ್ ಬ್ಯಾಂಕ್
ಅಧೀನದಲ್ಲಿರುವ ಬ್ಯಾಂಕುಗಳಿಗೆ ನಿರ್ದೇಶನ ನೀಡಿ
ಹಾಲಿಯಿರುವ ಬಡ್ಡಿದರವನ್ನು ಪರಿಷ್ಕರಿಸಿ
ಹಿಂದೆ ಇದ್ದ ಶೇಕಡ 9ರ ಬದಲಾಗಿ 12ಕ್ಕೆ
ಏರಿಸಬೇಕೆಂದು ಅದು ಏಪ್ರಿಲ್/ 1ರಿಂದಲೇ $\frac{1}{4}$
ಜಾರಿಗೆ ಬಂದಿರುವುದಾಗಿಯೂ ಸೂಚಿಸಿದೆ.
ಪ್ರಸ್ತುತ ಜಿಲ್ಲಾ ಬ್ಯಾಂಕ್ ತನ್ನ ಅಧೀನ
ಶಾಖೆಗಳಿಗೆ ನೀಡಿರುವ ಸಾಲವು ಹಳೆಯ ಬಡ್ಡಿ
ದರದಲ್ಲಿ ಇರುವುದರಿಂದ ಬ್ಯಾಂಕಿಗೆ ಲಕ್ಷಾಂತರ
ರೂ/ಪಾಯಿಗಳ ಕೊರತೆ ಬೀಳುವ ಸಂಭವ $\frac{1}{2}$
ಪರಿಶೀಲನೆ ಮತ್ತು ಹೊಸ ನಿಯಮದಂತೆ ಬಡ್ಡಿ
ದರ ಏರಿಸಲು ನಿರ್ಧಾರ ಹಾಗೂ ವ್ಯತ್ಯಾಸದ
ಬಡ್ಡಿಯನ್ನು ಆರು ಸಮ ಕಂತುಗಳಲ್ಲಿ ಪಾವತಿ
ಮಾಡಬೇಕೆಂದು/ ಕಾಲಕಾಲಕ್ಕೆ ಬದಲಾಗುವ $\frac{3}{4}$
ಸರ್ಕಾರಿ ನಿಯಮಗಳನ್ನು ಅನುಸರಿಸಿ
ಸಹಕರಿಸಬೇಕೆಂದು ಕೋರಿಕೆ. **ಅಧೀನ ಶಾಖೆಗಳಿಗೆ ನೀಡುವ ಸುತ್ತೋಲೆಯನ್ನು ಕಾರ್ಯದರ್ಶಿಗಳ ಸಹಿಗೆ ಸಿದ್ಧಪಡಿಸಿ.**X 5

(ಅಂಕಗಳು : 20)